“ಇದೇನು! ಎಲ್ಲಿ ಸಿಕ್ತು?”

“ಬಾಬಾ ಅವತ್ತು ನಂಗೆ ಅಂತ ತಂದಿದ್ದು. ಇದನ್ನ ಪ್ರೀತಿಗೆ ಕೊಡ್ತೀನಿ. ಆಮೇಲೆ ಬಾಬಾ ನಂಗೆ ಬೇರೆ ಇನ್ನೊಂದು ತರ್ತಾರೆ.”

ಅರ್ಧ ಗಂಟೆಯೊಳಗೆ ಬಿರುಗಾಳಿಯಂತೆ ದಾಶಗುಪ್ತೊ ಬಂದರು. ಶ್ಯಾಮಲ ವರ್ಣದ ಕೋಲು ಮುಖದಲ್ಲಿ ಚಿಂತೆ ತುಂಬಿಕೊಂಡಿತ್ತು. ತಲೆ ಕೂದಲು ಅಸ್ತವ್ಯಸ್ತವಾಗಿದ್ದವು. ಆದರೂ ಮುಖದಲ್ಲಿ ಮಂದಹಾಸವಿತ್ತು.

ಫರ್ಝಾನ್ಹಾ ರೆಡಿಯಾಗಿದ್ದಳು. ಫರೀನ್ ಕೈ ಹಿಡಿದು ಹತ್ತಿಸಿಕೊಂಡು ಗಾಡಿಯೊಳಗೆ ಕೂತಳು. ದಾಶಗುಪ್ತೊ ಅಕ್ಕರೆಯಿಂದ ಫರೀನ್ ತಲೆಕೂದಲಲ್ಲಿ ಕೈಯಾಡಿಸಿದರು. ಆಮೇಲೆ ಗಾಡಿ ಚಲಾಯಿಸತೊಡಗಿದರು. ಫರ್ಝಾನ್ಹಾ ಹೊರಗೆ ದಿಟ್ಟಿಸಿದಳು. ಸುತ್ತಲೂ ಇನ್ನೂ ಹೊಂಬಣ್ಣವಿತ್ತು.



ಪ್ರೀತಿ ಮನೆ ಮುಂದೆ ಅನೇಕ ಗಾಡಿಗಳು ನಿಂತಿದ್ದವು. ನೋಡಿದರೆ ತಂಬಾ ಜನ ಬಂದಿರಬೇಕು ಅನಿಸುತ್ತೆ. ಎದುರಿನ ಲಾನ್‌ನಲ್ಲಿ ಹೂಕುಂಡಗಳನ್ನು ಆಲಂಕಾರಿಕವಾಗಿ ಜೋಡಿಸಿದ್ದರು. ದಟ್ಟ ಹಸಿರು ಬಣ್ಣದ ರಬ್ಬರ್ ಮರದ ಕೆಳಗೆ ಹಾಕಿದ್ದ ಗಾರ್ಡನ್ ಕುರ್ಚಿಗಳಲ್ಲಿ ಅನೇಕ ಜನ ಕುಳಿತಿದ್ದರು. ಕೆಲವು ಮಕ್ಕಳು ಅತ್ತಿಂದಿತ್ತ ಓಡಾಡುತ್ತಿದ್ದರು. ಗಾಡಿಯಿಂದಿಳಿದ ಫರ್ಝಾನ್ಹಾ ಮತ್ತು ಫರೀನ್ ದಾಶಗುಪ್ತೊ ಜೊತೆ ಒಳಗೆ ಡ್ರಾಯಿಂಗ್ ರೂಮಿಗೆ ಹೋದರು. ವಿಶಾಲವಾದ ಆ ಡ್ರಾಯಿಂಗ್ ರೂಮನ್ನು ಬಹಳ ವಿಶೇಷವಾಗಿ ಅಲಂಕರಿಸಿದ್ದರು. ಹೊಸ ಪರದೆಗಳನ್ನು ಹಾಕಿದ್ದರು. ಸೋಫಾ ಎದುರಿಗಿದ್ದ ಕೆತ್ತನೆ ಕೆಲಸ ಮಾಡಿದ್ದ ಟೇಬಲ್ ಮೇಲೆ ನೂರಾರು ಹೂಗುಚ್ಛಗಳಿದ್ದವು. ಕೆಲವರು ಸೋಫಾ ಮೇಲೆ ಕುಳಿತಿದ್ದರು, ಕೆಲವರು ಅತ್ತಿಂದಿತ್ತ ಅಡ್ಡಾಡುತ್ತಿದ್ದರು.

ಫರ್ಝಾನ್ಹಾಳನ್ನು ನೋಡಿ ಶ್ರೀಮತಿ ದಾಶಗುಪ್ತೊ ಆ ಕಿವಿಯಿಂದ ಈ ಕಿವಿಯವರೆಗೆ ನಗುತ್ತಾ ಮುಂದೆ ಬಂದು, “ಸದ್ಯ, ನೀವು ಬಂದ್ರಲ್ಲಾ! ಎಷ್ಟು ಚಿಂತೆ ಹತ್ತಿಕೊಂಡಿತ್ತು! ಒಬ್ಬಳೇ ಮಗಳು, ಹುಟ್ಟಿದ ಹಬ್ಬದ ದಿನ ಬೈದು ಹೊರಗೆ ಕರೆಯೋಕೂ ಆಗೋಲ್ಲ. ಅದಕ್ಕೆ ನಿಮಗೆ ತೊಂದರೆ ಕೊಡಬೇಕಾಯ್ತು.”

“ಹಾಂ, ಈಗಿನ ಮಕ್ಕಳಿಗೆ ತುಂಬಾ ಹಟ!”

“ಹೌದು, ಕಾಲ ಬದಲಾಗಿದೆ. ಹೇ ಫರೀನ್, ಬಾ. ನೀನೇ ಇವತ್ತು ನಮ್ಮ ವಿಶೇಷ ಅತಿಥಿ!”

ಫರೀನ್ ಕೈ ಹಿಡಿದು ಹಜಾರದ ರೂಮಿನ ಬಳಿ ಕರೆದೊಯ್ದು ಶ್ರೀಮತಿ ದಾಶಗುಪ್ತೊ ಅಂದರು,“ಅವಳನ್ನು ಕರಿ, ನಾನು ಬಂದಿದಿನಿ, ಬಾ ಅಂತ”.

ಡ್ರಾಯಿಂಗ್ ರೂಮಲ್ಲಿ ಕುಳಿತಿದ್ದವರು, ಅತ್ತಿಂದಿತ್ತ ಓಡಾಡುತ್ತಿದ್ದವರು, ಕುತೂಹಲದಿಂದ ಎದುರಿಗಿದ್ದ ರೂಮಿನೆಡೆ ದೃಷ್ಟಿ ಹರಿಸಿದರು.

ಸೋಫಾದಲ್ಲಿ ಫರ್ಝಾನ್ಹಾ ಪಕ್ಕ ಕೂತಿದ್ದ ಒಬ್ಬ ದಷ್ಟಪುಷ್ಟ ಮಹಿಳೆ ಕೇಳಿದರು, “ಓ, ಅವಳೇನಾ ಪ್ರೀತಿಯ ಪ್ರಿಯ ಬಾಂಧವಿ? ಅವಳಿಗೋಸ್ಕರಾನೆ ಇಷ್ಟೆಲ್ಲ! ಪ್ರೀತಿ ರೂಮಿಂದ ಈಚೆಗೆ ಬರ್ತಾ ಇಲ್ಲ”.

ಫರ್ಝಾನ್ಹಾ ಹೌದೆಂದು ತಲೆಯಾಡಿಸಿದಳು.

ತನ್ನನ್ನು ತಾನು ಪರಿಚಯಿಸಿಕೊಳ್ಳುತ್ತಾ ಆ ಮಹಿಳೆ ಹೇಳಿದಳು, “ನಾನು ಪ್ರೀತಿಯ ಸೋದರತ್ತೆ. ನೀವು ಆ ಮಗುವಿನ ಅಮ್ಮ ಇರಬೇಕು”.

ಫರ್ಝಾನ್ಹಾ ನಸುನಕ್ಕು, “ಹೌದು” ಎಂದಳು.

ಅಷ್ಟೊತ್ತಿಗೆ ಬಾಗಿಲು ತೆರೆಯಿತು. ಮುದ್ದಾದ ಪುಟ್ಟ ಹುಡುಗಿಯೊಬ್ಬಳು ಈಚೆಗೆ ಬಂದಳು. ಅವಳು ಬೇರೆ ಯಾರನ್ನೂ ನೋಡದೆ ಒಂದೇ ಏಟಿಗೆ ಫರೀನ್ ಹತ್ತಿರ ಓಡಿದಳು. ಎಂಥ ಚಮತ್ಕಾರದ